ಕರ್ನಾಟಕ ವಿಧಾನ ಸಭೆ

ಮಂಗಳವಾರ 03ನೇ ಆಗಸ್ಟ್ 2004 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11-10 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಕೃಷ್ಣ) ರವರು

ಪೀಠವನ್ನು ಅಲಂಕರಿಸಿದ್ದರು

(1) ಸಂತಾಪ ಸೂಚನೆ

ಅಧ್ಯಕ್ಷರು : ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಕೆ.ಎನ್. ಸೋಮ ಸುಂದರಂ ಅವರು ನಿಧನರಾಗಿರುವುದನ್ನು ವಿಷಾದದಿಂದ ಸದನಕ್ಕೆ ತಿಳಿಯಬಯಸುತ್ತೇನೆ. ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಕೆ.ಎನ್. ಸೋಮಸುಂದರಂ ಅವರು 1926ರ ಜುಲೈ 4ರಂದು ಮೈಸೂರು ಜಿಲ್ಲೆಯ ರಾಮಸಮುದ್ರದಲ್ಲಿ ಜನಿಸಿದ್ದರು. ಕಾನೂನು ಪದವೀಧರರಾದ ಶ್ರೀಯುತರು ವೃತ್ತಿಯಲ್ಲಿ ವಕೀಲರಾಗಿದ್ದರು. ಶ್ರೀಯುತರು 1942ರಲ್ಲಿ ಕ್ವಿಟ್ ಇಂಡಿಯಾ ಹಾಗೂ 1947ರಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರು. 1962 ರಿಂದ 1965ರವರೆಗೆ ಸಿ.ಐ.ಟಿ.ಬಿ. ಸದಸ್ಯರಾಗಿ, 1972ರಿಂದ 1973ರ ವರೆಗೆ ಮೈಸೂರು ನಗರಸಭೆಯ ಅಧ್ಯಕ್ಷರಾಗಿ, 1983 ರಿಂದ 1988 ರವರೆಗೆ ಮೈಸೂರು ನಗರಪಾಲಿಕೆಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. ಕಾರ್ಮಿಕ ನಾಯಕರಾಗಿದ್ದ ಶ್ರೀಯುತರು 1989ರಲ್ಲಿ ಕೃಷ್ಣರಾಜ ಕ್ಷೇತ್ರದಿಂದ 9ನೇ ವಿಧಾನಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ದಿನಾಂಕ 2ನೇ ಆಗಸ್ಟ್ 2004ರಂದು ನಿಧನ ಹೊಂದಿದರು.

†ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಕೆ.ಎನ್. ಸೋಮಸುಂದರಂ ಅವರು ನಿಧನರಾಗಿರುವುದರಿಂದ ನಿಜವಾಗಿಯೂ ರಾಜ್ಯಕ್ಕೆ ತಡೆಯಲಾಗದಂಥ ನೋವಾಗಿದೆ. ಶ್ರೀ ಸೋಮಸುಂದರಂ ಅವರು 1926ನೇ ಇಸವಿಯಲ್ಲಿ ಜುಲೈ ನಾಲ್ಕರಂದು ಮೈಸೂರು ಜಿಲ್ಲೆಯ ರಾಮಸಮುದ್ರದಲ್ಲಿ ಜನಿಸಿದಂಥವರು. ಅವರು ಒಬ್ಬ ಕಾನೂನು ವಕೀಲರೂ ಕೂಡ ಆಗಿದ್ದರು. ಅವರು ಕ್ವಿಟ್ ಇಂಡಿಯಾ ಚಳುವಳಿಯಲ್ಲೂ ಕೂಡ ಪಾಲ್ಗೊಂಡು ಸ್ವಾತಂತ್ರ್ಯ ಹೋರಾಟಗಾರರೂ ಕೂಡ ಆಗಿದ್ದರು. ಅವರು 1962ರಿಂದ 65ರವರೆಗೆ ಸಿ.ಐ.ಟಿ.ಬಿ. ಸದಸ್ಯರಾಗಿದ್ದರು ಮತ್ತು 1972ರಿಂದ 73ರವರೆಗೆ ಮೈಸೂರು ನಗರಸಭೆಯ ಅಧ್ಯಕ್ಷರಾಗಿ ತಾವು ಹೇಳಿದಂತೆ ಅನೇಕ ಕೆಲಸಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಮೈಸೂರು ನಗರಪಾಲಿಕೆಯ ಸದಸ್ಯರೂ ಕೂಡ ಆಗಿದ್ದು, ಕಾರ್ಮಿಕ ನಾಯಕರಾಗಿ ಕೂಡ ಕೆಲಸ ಮಾಡಿದಂಥ ಶ್ರೀಯುತರು 9ನೇ ವಿಧಾನಸಭೆಗೆ 1989ರಲ್ಲಿ ಆಯ್ಕೆಯಾಗಿದ್ದರು. ಮಾನ್ಯ ಅಧ್ಯಕ್ಷರೆ, ಮಾನ್ಯ ಸೋಮಸುಂದರಂ ಅವರ ನಿಧನದಿಂದ ನಿಜವಾಗಿಯೂ ಕೂಡ ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆಯೆಂದು ಹೇಳುತ್ತಾ ತಾವು ಮಂಡಿಸಿದಂಥ ಸಂತಾಪ ಸುಚನೆಗೆ ಸಹಮತವನ್ನು ನಾನು ವ್ಯಕ್ತಪಡಿಸುತ್ತೇನೆ.

†ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಮಾಜಿ ವಿಧಾನಸಭಾ ಸದಸ್ಯರಾದ ಶ್ರೀ ಕೆ.ಎನ್. ಸೋಮಸುಂದರಂ ಅವರು ದಿವಂಗತರಾಗಿದ್ದು ತಾವು ಮಂಡಿಸಿದ ಸಂತಾಪ ಸೂಚನೆಗೆ ನಾನು ಅನುಮೋದನೆ ಮಾಡುತ್ತಾ, ತಮಗೆ ಗೊತ್ತಿರುವ ಹಾಗೆ ಶ್ರೀ ಕೆ.ಎನ್. ಸೋಮಸುಂದರಂ ಅವರು ಬಹಳ ಪ್ರಮುಖವಾಗಿ

1942ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಮತ್ತು ಸ್ವಾತಂತ್ರ್ಯ ಸಂಗ್ರಾಮದಲ್ಲಿಯೂ ಕೂಡ ಪಾಲ್ಗೊಂಡು ದೇಶಕ್ಕೆ ಕೊಡುಗೆಯನ್ನು ಕೊಟ್ಟಂಥ ಒಬ್ಬ ಹಿರಿಯ ವ್ಯಕ್ತಿಯಾಗಿದ್ದರು. ಮೈಸೂರು ಮಹಾನಗರ ಸಭೆಯ ಅಧ್ಯಕ್ಷರಾಗಿ ಕೆಲಸ ಮಾಡಿದಂಥವರು. ಅಲ್ಲಿ ಯಾವುದೇ ಕಾರ್ಮಿಕ ಸಮಸ್ಯೆಗಳು ಬಂದಾಗ ಕೂಡಲೇ ಸ್ಪಂಧಿಸಿದಂಥ ಒಬ್ಬ ಹಿರಿಯರು. 9ನೇ ವಿಧಾನ ಸಭೆಯಲ್ಲಿ, ಈ ಮನೆಯ ಸದಸ್ಯರಾಗಿ ಕೆಲಸ ಮಾಡಿದಂಥ ಹಿರಿಯರನ್ನು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಶಾಂತಿ ಕೋರಿ, ಈ ದುಃಖವನ್ನು ಅವರ ಕುಟುಂಬದವರು ಮತ್ತು ಬಂಧುಗಳು ಸಹಿಸುವಂಥ ಶಕ್ತಿಯನ್ನು ಭಗವಂತ ಕೊಡಲಿ ಎಂದು ಪ್ರಾರ್ಥನೆ ಮಾಡಿ, ತಾವು ತಂದಿರುವ ಸಂತಾಪ ಸೂಚನೆಗೆ, ನನ್ನ ಅನುಮೋದನೆ ಇದೆಯೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಸದಸ್ಯರುಗಳೆಲ್ಲರೂ ಒಂದು ನಿಮಿಷ ಎದ್ದುನಿಂತು ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ವಿಧಾನ ಸಭೆಯ ಮಾನ್ಯಸದಸ್ಯರುಗಳೆಲ್ಲರೂ ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು : ಈ ಸಭೆ ಅಂಗೀಕರಿಸಿದ ಸಂತಾಪ ಸೂಚನೆಯ ನಿರ್ಣಯದ ಪಟ್ಟಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುವುದು.

2. ಅಧ್ಯಕ್ಷರ ಅಪ್ಪಣೆ ಮೇರೆಗೆ

1) ಸಿಇಟಿಯ ಮುರಗೋಡು ಫೀ ಸ್ಟ್ರಕ್ಚರ್ ಬಗ್ಗೆ ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು ಸುಪ್ರೀಮ್ ಕೋರ್ಟಿಗೆ ಹೋಗಿರುವ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ ಒಂದೇ. ಒಂದು ತಮ್ಮಲ್ಲಿ ವಿನಂತಿ. ನಮ್ಮ ಹಿರಿಯ ಸಚಿವರಾದಂಥ ಕಂದಾಯ ಮುಜರಾಯಿ ಸಂಸದೀಯ ಸಚಿವರೂ ಅದಂಥ ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರು ಇಲ್ಲಿದ್ದಾರೆ. ನಾವು ಆರನೇ ತಾರೀಖಿಗೆ ಅಧಿವೇಶನ ಮುಗಿಸುತ್ತಾ ಇದ್ದೇವೆ. ಅಷ್ಟರಲ್ಲಿ ಕೆಲವು ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಹುಡುಕದೇ ಹೋದರೆ, ನಾವೆಲ್ಲಾ 224 ಜನ, ಜನರಿಗೆ ಮುಖ ತೋರಿಸುವುದು ಹೇಗೆ? ಉದಾಹರಣೆಗೆ, ಬೇರೆ ಸಮಯದಲ್ಲಿ ಚರ್ಚೆ ಮಾಡೋಣ. ಈ ಮುರುಗೋಡು ಫೀ ಸ್ಟ್ರಕ್ಚರ್ ಬಗ್ಗೆ, ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು ಸುಪ್ರೀಂ ಕೋರ್ಟಿಗೆ ಈ ಫೀ ಸ್ಟ್ರಕ್ಚರ್ ಸಾಧ್ಯವಿಲ್ಲವೆಂದು ಹೋಗಿದ್ದಾರೆ. ಅಷ್ಟೇ ಅಲ್ಲ, ಅಡ್ಮಿಷನ್ ಸಂದರ್ಭದಲ್ಲಿ ಮಕ್ಕಳಿಂದ ಅಗ್ರಿಮೆಂಟ್ ಬರೆಸಿ ಕೊಂಡು, ನಾಳೆ ಯಾವುದು ವ್ಯತ್ಯಾಸಗಳಾಗುತ್ತೆ, ಆ ದುಡ್ಡನ್ನು ಕೊಡುವುದಕ್ಕೆ ನೀವು ಸಿದ್ಧರಾಗಿರಬೇಕೆಂದು, ಅವರ ಹತ್ತಿರ ಮುಚ್ಚಳಿಕೆ ಬರೆಸಿಕೊಂಡು ಅಡ್ಮಿಷನ್ ಮಾಡಿಕೊಳ್ಳುತ್ತಿದ್ದಾರೆ. ತಾವೇನೋ ಒಂದು ಹೇಳಿದ್ದೀರಿ, ನಾವೂ ಕೂಡ ಒಂದು ಹೇಳಿದ್ದೇವು. ಸುಪ್ರಿಂಕೋರ್ಟ್ ಒಂದು ಹೇಳಿತು. ಮ್ಯಾನೇಜ್‌ಮೆಂಟಿನವರು ಬಗ್ಗದೆ. ಅವರದೇ ಆದ ಧಾಟಿಯಲ್ಲಿ ಮುಂದುವರಿಸಿದ್ದಾರೆ. ಯಾವುದೇ ಸಮಸ್ಯೆಗಳು ಬರಿದಾಗ, ಸರ್ಕಾರದ ಜೊತೆಗೆ ನಾವು ಸ್ಪಂದಿಸಿದ್ದೇವೆ. ಈ ಸಮಸ್ಯೆಗೆ ಪರಿಹಾರ ಹುಡುಕದೇ ಇದ್ದರೆ, ಸನ್ಮಾನ್ಯ ಹಿರಿಯ ಸಚಿವರಾದ ಪ್ರಕಾಶ್‌ರವರೇ, ಖಂಡಿತ ಇವತ್ತು 4–5 ಸಾವಿರ ಸೇರಿರುವ ವಿದ್ಯಾರ್ಥಿ–ವಿದ್ಯಾರ್ಥಿನಿಯರ ಪ್ರಶ್ನೆ ಅಲ್ಲ. ಮುಂದೆಯಾದರೂ ಡಾಕ್ಟರಾಗಬೇಕು, ಇಂಜಿನಿಯರಾಗಬೇಕು ಎಂದು ಕನಸು ಕಾಣುತ್ತಿದ್ದರಲ್ಲ, ಈ ಜನ್ಮದಲ್ಲಿ ಇದು ಸಾಧ್ಯವಿಲ್ಲವೆಂಬ ತೀರ್ಮಾನಕ್ಕೆ ಬಂದು, ಅವರು ಚಿಂತೆ ಮಾಡಿ, ಮಾಡಿ ಆ ತಂದೆ ತಾಯಿಗಳು ಮತ್ತು ಮಕ್ಕಳು ಕುಸಿದು ಹೋಗುತ್ತಿದ್ದಾರೆ. ಪ್ರತಿನಿತ್ಯ ಬರುತ್ತಾ ಇರತಕ್ಕಂಥ